



ಸ್ವಾಮಿ ಚೇತನಾನಂದರ "ಸ್ವಾಮಿ ಪ್ರೇಮಾನಂದೇರ್ ಜೀವನ್ ಓ ಸ್ಮೃತಿಕಥಾ" ಎಂಬ ಬಂಗಾಳಿ ಪುಸ್ತಕದಿಂದ ಕಥೆಗಳನ್ನು ಆಯ್ದು ಅನುವಾದ ಮಾಡಿಕೊಟ್ಟಿರುವವರು ಬೆಂಗಳೂರಿನ ಕುಮಾರಿ ಮೀನಾ.

## ಜಾಣ ಶಿಷ್ಯ !!

ಒಬ್ಬ ಗುರುವಿಗೆ ಒಬ್ಬನೇ ಶಿಷ್ಯನಿದ್ದ. ಆತನ ಹೆಸರು ಹರಿ. ಆತ ಸದಾ ಗುರುವಿನ ಜೊತೆಯಲ್ಲಿಯೇ ಇರುತ್ತಿದ್ದರೂ ಗುರುವೇ ದೇವರ ಪೂಜೆ, ಭಿಕ್ಷಾ ಸಂಗ್ರಹಣೆ ಮುಂತಾದ ಎಲ್ಲ ಕೆಲಸಕಾರ್ಯಗಳನ್ನೂ ಮಾಡಬೇಕಿತ್ತು! ಒಂದು ದಿನ ಬೆಳಗಿನ ಜಾವ ಗುರು ಎದ್ದು ನೋಡುತ್ತಾರೆ, ಶಿಷ್ಯ ನಿದ್ದೆಯಿಂದ ಇನ್ನೂ ಎದ್ದಿಲ್ಲ! ಶಿಷ್ಯನನ್ನು ಕರೆದು ಎಬ್ಬಿಸಿ ತಾವೇ ದೇವಸ್ಥಾನಕ್ಕೆ ಹೋಗಿ ಮಂಗಳಾರತಿಯನ್ನು ಮಾಡಿ ದೇವರ ಅಂಗಳ ಶುಚಿಗೊಳಿಸಿದರು. ನಂತರ ಸ್ನಾನ ಮಾಡಲು ಹೋದರು. ಈ ಮಧ್ಯೆ ಶಿಷ್ಯ ಎದ್ದು ಕೈಕಾಲು ಮುಖ ತೊಳೆದು ದೇವಸ್ಥಾನದಲ್ಲಿ ಧ್ಯಾನ ಜಪ ಮಾಡಲು ಕುಳಿತ. ಸ್ನಾನ ಮಾಡಿ ಬಂದು ಗುರು ನೋಡುತ್ತಾರೆ, ಶಿಷ್ಯ ಇನ್ನೂ ನಿದ್ದೆಯ ಮಂಪರಿನೊಂದಿಗೆ ಜಪ ಮಾಡುತ್ತಲೇ ಇದ್ದಾನೆ! ಆಗ ಗುರು ಆತನನ್ನು ಕರೆದು ಹೇಳಿದರು, "ಮಗು ಹರಿ, ಈಗ ಸ್ನಾನ ಮಾಡಿ ದೇವರ ಮನೆಯ ಕೆಲಸವನ್ನು ಪೂರ್ತಿ ಮಾಡು." ಹರಿ ಹೇಳಿದ, 'ಗುರುವೇ, ಜಪ ಮಾಡುತ್ತಿರುವೆ." ಗುರುವು ಹೋಗಲಿ, ಏನು ಮಾಡುವುದೆಂದು ತಾವೇ ದೇವರ ಮನೆಯ ಕೆಲಸ ಮಾಡಿ ಮುಗಿಸಿದರು. ಹೂವನ್ನು ಬಿಡಿಸಿ ತಂದು ಚಂದನ ತೇಯ್ದಾದ ಮೇಲೂ ಶಿಷ್ಯ ಇನ್ನೂ ಜಪ ಮಾಡುತ್ತಲೇ ಇದ್ದಾನೆ! ಸಮಯ ಮೀರುತ್ತಿರುವುದನ್ನು ಕಂಡು ಗುರು ಮತ್ತೊಮ್ಮೆ ಶಿಷ್ಯನನ್ನು ಕರೆದರು "ಹರಿ, ಈಗ ನಡೆ, ಭಿಕ್ಷೆಗೆ ಹೋಗೋಣ." ಶಿಷ್ಯ ಈಗ ಸ್ವಲ್ಪ ಅಲ್ಲಾಡಿ ಹೇಳಿದ, 'ಗುರುವೇ, ನೀವೇ ಅಲ್ಲವೇ ಹೇಳಿದ್ದು, ಸದಾ ಭಗವಂತನ ಸ್ಮರಣೆ ಮಾಡಬೇಕೆಂದು. ನಾನೀಗ ಜಪದಲ್ಲಿ ಇರುವೆ." ಗುರು ಭಾವಿಸಿದ, 'ಹೌದು ನಿಜ. ನಾನೇ ಆತನಿಗೆ ಸದಾ ಈಶ್ವರನ ಬಗ್ಗೆ ಚಿಂತನೆ ಮಾಡಲು ಹೇಳಿದೆನಲ್ಲವೆ!" ಇನ್ನು ಮಾಡುವುದೇನು? ತಾವೊಬ್ಬರೇ ಭಿಕ್ಷೆಗೆ ಹೊರಟರು. ಮಧುಕರಿ ಭಿಕ್ಷೆ ತಂದು ಸುಸ್ತಾಗಿ ಹೇಳಿದರು, 'ಮಗು, ಹರಿ ಈಗ ಬಂದು ದೇವರಿಗಾಗಿ ಅನ್ನ ಮಾಡಿ ನಿವೇದನೆ ಮಾಡು."



ಹರಿ ಹೇಳಿದ, 'ಗುರುದೇವ, ನನ್ನನ್ನು ಚಂಚಲನನ್ನಾಗಿ ಮಾಡಬೇಡಿ. ನಾನು ಜಪದಲ್ಲಿರುವೆ." ಗುರು ತಾವೇ ಎದ್ದು ಅನ್ನವನ್ನು ಮಾಡಿ ಭಗವಂತನಿಗೆ ನಿವೇದಿಸಿದರು. ಅನಂತರ ಎರಡು ಆಸನ ಹಾಕಿ, ಎರಡು ಎಲೆಗಳಲ್ಲಿ ಪ್ರಸಾದವನ್ನು ಇಟ್ಟು ಆ ಶಿಷ್ಯನನ್ನು ಕರೆದರು, 'ಮಗು, ಹರಿ ಬಾ. ದೇವರಿಗೆ ನೈವೇದ್ಯ ಆಯಿತು. ಸ್ವಲ್ಪ ಪ್ರಸಾದ ಸ್ವೀಕರಿಸು ಬಾ." ಆಗ ಹರಿಗೆ, "ಓ ಎಂತಹ ಅನ್ಯಾಯ! ಬೆಳಗಿನಿಂದ ಗುರುವಿನ ಆಜ್ಞೆ ಉಲ್ಲಂಘಿಸಿ ಪಾಪ ವೃದ್ಧಿಯಾಗುತ್ತಿದೆ. ಇನ್ನು ಬೇಡ" ಎಂದು ಅನ್ನಿಸಿತು, ಗುರುವಿನ ಮಾತನ್ನು ಪಾಲಿಸುವವನಂತೆ ಪ್ರಸಾದ ಸ್ವೀಕರಿಸಲು ಕುಳಿತ!